ಆಕಸ್ಮಿಕವಾಗಿರಲಾರದೇಕೆ? ಹಾಗೆಯೇ ಇಲ್ಲಿ ಬಂದು ಎರಡೂ ವಾರಗಳೂ ಆಗಿಲ್ಲ, ಅಷ್ಟರಲ್ಲೇ ಗೇಟಿನಲ್ಲಿ ಕಾಣಿಸಿಕೊಂಡ ಹುಡುಗನಿಗೂ ಮುವ್ವತ್ತು ವರ್ಷಗಳ ಹಿಂದೆ ಕಂಡವನಿಗೂ ತಂದೆ ಮಕ್ಕಳ ಸಂಬಂಧ ಹುಟ್ಟಿಕೊಂಡದ್ದು ಕೂಡ ಅದ್ಭುತ ಕಲ್ಪನೆಯೇ ಆಗಿರಬಹುದಲ್ಲವೇ? ಏನು ಹೇಳಿದ ಗೊತ್ತೆ?' 'ಹಾಗೆ ನೋಡಿದರೆ ನಾವು ಪರಸ್ಪರ ಬದುಕಿನಲ್ಲಿ ಬಂದ ರೀತಿ. ಅದನ್ನು ನಾವು ಗುರುತು ಹಿಡಿದ ರೀತಿ ಎಲ್ಲವೂ ದಿವ್ಯ ಆಕಸ್ಮಿಕವೇ ಅಲ್ಲವೇ? ಅದ್ಭುತ ಕಲ್ಪನೆಯೇ ಅಲ್ಲವೇ?' ಹೀಗೆ ಒಂದು ಬಗೆಯ ಮುಗ್ಧ ತುಂಟತನದಿಂದ ಮುಗುಳ್ನಗುತ್ತ ನಮ್ಮ ಕಡೆಗೆ ನೋಡುತ್ತ ಕುಳಿತುಬಿಟ್ಟ. ಬಹುಶಃ ಇವನು ಮತ್ತೆ ಮಾತನಾಡಲಾರ. ಒಗಟಿನಂತಹ ಪ್ರಶ್ನೆಯೇ ಇವನ ಕೊನೆಯ ಮಾತೇನೋ ಎಂದು ಅನ್ನಿಸಹತ್ತುವ ಹಾಗೆ ಪೂರ್ತಿ ಎರಡು ಮಿನಿಟುಗಳು ತುಟಿ ಎರಡು ಮಾಡಲಿಲ್ಲ. ನಾವೆಲ್ಲ ಕೂತಲ್ಲೇ ಚಡಪಡಿಸುತ್ತಿದ್ದಾಗ ಅದೇ ಶಾಂತ ಮುಗ್ಧತೆಯಿಂದ, ಈ ಮೊದಲಿಗಿಂತಲೂ ತಗ್ಗಿದ ದನಿಯಲ್ಲಿ ಅಂದ – 'ನನ್ನ ಲಕ್ಷ್ಮಿ ಮದುವೆಯ ಮಂಟಪದಲ್ಲಿ ಕೈಹಿಡಿದವಳಾಗಿ ಬಂದಳು. ಹೆಂಡತಿಯೆಂದು ಗುರುತಿಸಿ ಮನೆಗೆ ಬರಮಾಡಿಕೊಂಡೆ; ಇವರಿಬ್ಬರೂ ನಮ್ಮ ಹೊಟ್ಟೆಯಲ್ಲಿ ಹುಟ್ಟಲು ಬಂದವರು, ಮಕ್ಕಳೆಂದು ಗುರುತಿಸಿ ಬೆಳೆಸಿದೆವು. ಹಾಗೆಯೇ ನೀವು ಬಂದಾಗ ಈ ಮಕ್ಕಳ ಗೆಳೆಯರು ಎಂದು ಕರೆದೆವು. ನಮ್ಮನ್ನು ಹುಡುಕಿ ಗೇಟಿನವರೆಗೆ ಬಂದ ಹುಡುಗನನ್ನು...'' ರಾವ್‌ಜೀಭಾಯಿ ತನ್ನ ವಾಕ್ಯವನ್ನು ಪೂರ್ಣಗೊಳಿಸಿರಲಿಲ್ಲ, ಬಹುಶಃ ಆ ಹುಡುಗನನ್ನು ನೀವು ಸರಿಯಗಿ ಗುರುತಿಸಲಿಲ್ಲ ಎನ್ನಬೇಕಾಗಿತ್ತೇನೋ. ಅದ್ಭುತ ಕಲ್ಪನೆ ನೆರವಿಗೆ ಬರಲಿಲ್ಲವಾದ್ದರಿಂದಲೇ 'ಝೋಪಟ್ಟಿಯ ಹುಡುಗ' ಎಂದು ಕರೆದು ಓಡಿಸಿಬಿಟ್ಟಿರಿ ಎನ್ನಬೇಕಾಗಿತ್ತೇನೋ. ಕೆಲ ಹೊತ್ತು ಯಾರೂ ಮಾತನಾಡಲಿಲ್ಲ. ಆ ಮೇಲೆ, ಅವನೇ ಇನ್ನೂ ತಗ್ಗಿದ ದನಿಯಲ್ಲಿ – ''ನನಗೆ ಎಳ್ಳಷ್ಟೂ ಸಂಶಯವಿಲ್ಲ, ಗೇಟಿನಲ್ಲಿ ಕಾಣಿಸಿಕೊಂಡ ಹುಡುಗ ನನ್ನನ್ನು ಹುಡುಕಿಕೊಂಡು ಬಂದ ನನ್ನ ಮೊಮ್ಮಗನೆ'' ಎಂದ. ಮುದುಕನ ದನಿಯಲಿ ತುಂಟ ಹುಡುಗನ ಮೊಂಡುತನವಿತ್ತು''.

ಸೋರಾಬನ ಮಲಗುವ ಕೋಣೆಯೊಳಗಿನ ಟೆಲಿಫೋನ್ ಗಂಟೆ ಸತತವಾಗಿ ಸದ್ದು ಮಾಡತೊಡಗಿದ್ದರೂ ಯರೊಬ್ಬರೂ ಕೇಳಿಸಿಕೊಳ್ಳುವ ಸ್ಥಿತಿಯಲ್ಲೇ ಇರಲಿಲ್ಲ. ಜಿತೇಂದ್ರ ಶಹನ ಮನೆಯಲ್ಲಿ ಸಂಜೆ ನಡೆದುದರ ವೃತ್ತಾಂತವನ್ನು ಅಜ್ಜ–ಅಜ್ಜಿಯರಿಗೆ ಒಪ್ಪಿಸಿಯಾದ ಮೇಲೆ ಸೋರಾಬನ ಮಾತು ಮ್ಯಾಕೆಲ್–ಡಾಯನಾರ ಸಲುವಾಗಿ, ರಾವ್‌ಜೀಭಾಯಿಯ ಬದುಕಿನ ಕೆಲವು ನಂಬಲಾಗದ ಘಟನೆಗಳತ್ತ ತಿರುಗಿತ್ತು. ಪಂಚಗಣಿಗೆ 'ಕಾಲ್' ಬುಕ್ ಮಾಡಿದ ಡಾಯನಾ ಕೂಡ, ಖುದ್ದು ನೋಡಿದ ರಾವ್‌ಜೀಭಾಯಿಗಿಂತ ಸೋರಾಬನ ಕಳಕಳಿ ತುಂಬಿದ ಮಾತುಗಳಲ್ಲಿ ಮೂಡಿಬಂದ ವ್ಯಕ್ತಿತ್ವದಿಂದ ಮಂತ್ರ ಮುಗ್ಧಳಾಗಿ ಕೇಳುವ ಭರದಲ್ಲಿ ಟೆಲಿಫೋನನ್ನು ಸಂಪೂರ್ಣವಾಗಿ ಮರೆತಂತಿತ್ತು. ಹತಾಶಗೊಂಡ ಟೆಲಿಫೋನ್ ತಾನಾಗಿಯೇ ಕಿರಿಚುವುದನ್ನು ನಿಲ್ಲಿಸಿತು!

ಸೋರಾಬನ ಆವೇಗ ತುಂಬಿದ ಮಾತು ಮುಗಿದ ಮೇಲೆಯೆ ಪ್ರತಿಯೊಬ್ಬರೂ ತಮ್ಮ ತಮ್ಮ ಪಾನೀಯದ ಗ್ಲಾಸಿಗೆ ಕೈ ಹಚ್ಚಿದ್ದರು. ಹುರುಪು ಬಂದವನ ಹಾಗೆ ಮ್ಯಾಕೆಲ್ ಸಾರಿದ – ''**that old man is really beautiful.** ಸೋರಾಬ್, 'ಬ್ಯಾಂಡ್ ಸ್ಟ್ಯಾಂಡ್ ನ್ಯೂಸ್' ಮತ್ತೆ ಆರಂಭವಾಗುತ್ತದೆ. **and you must help me.** ಅವನನ್ನು ನಾನು ಇವತ್ತು ಕಂಡದ್ದಕ್ಕೆ ಇದೇ ಅರ್ಥವೆಂದು ತಿಳಿಸುತ್ತೇನೆ. ಆ ಮುದುಕ ಹೋದ ಜಾಗಗಳಿಗೆಲ್ಲ ಹೋಗಿ ನಾನೇ ಮಾಹಿತಿ ದೊರಕಿಸುತ್ತೇನೆ. ಅವನಿದ್ದ 'ಬೆಗ್ಗರ್ಸ್ ಹೋಮ್'ಗೂ ಹೋಗಿ ಬರುತ್ತೇನೆ! 'ಬ್ಯಾಂಡ್ ಸ್ಟ್ಯಾಂಡ್